ಅನುಬಂಧ—೧

ತಂರುವೇಕೆರೆ. ದ್ವಾರನಹಳ್ಳಿ

ಕ್ರಮ ಸಂಖ್ಯೆ	ಬೀಜದ ತೆಂಗಿನ ಕಾಯಿ ಕೊಟ್ಟವರ ಹೆಸರು	ತೆಂಗಿನಕಾಯಿಗಳ ಸಂಖ್ಯೆ	ಬಡವಾಡೆ ಮಾಡಿದ ಹಣ ರೂ.
೧	೨	೩	೪
೧	ಡಿ. ಬಿ. ಬಸವರಾಜು, ದ್ವಾರನಹಳ್ಳಿ	೨೦೦೦	—
೨	ರಂಗೇಗೌಡ ,,	೧೦೦೦	೨೬೩೦–೦೦
೩	ಡಿ. ಎಸ್. ಪರಮೇಶ್ವರಯ್ಯ ,,	೬೦೦	೨೧೧೨–೦೦
೪	ನರಸಿಂಹಯ್ಯ ,,	೪೦೦	೧೪೦೮–೦೦
೫	ನರಸಿಂಹಯ್ಯ ,,	೫೦೦	೧೮೧೫–೦೦
೬	ವಿರೂಪಾಕ್ಷಯ್ಯ ,,	೧೨೫೦	೪೫೬೭–೫೦
೭	ಪುಟ್ಟಬಸವಯ್ಯ ,,	೧೨೫೦	೪೫೬೭–೫೦
೮	ಡಿ.ಎಸ್. ಪರವೇಶ್ವರಯ್ಯ ,,	೨೦೦೦	೭೨೬೦–೦೦
೯	ವಿರೂಪಾಕ್ಷಯ್ಯ ,,	೫೦೦	೧೮೬೦–೦೦
೧೦	ಪುಟ್ಟಬಸವಯ್ಯ ,,	೫೦೦	೧೮೬೦–೦೦
		೧೦೦೦೦	೩೬,೪೨೦–೦೦

ಸರ್ಕಾರವು ಪರೀಕ್ಷಾ ಪದ್ಧತಿಯನ್ನು ಬದಲಾಯಿಸಿರುವುದು

೧೬೮೪. ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೬–೫೭ ಮತ್ತು ೧೯೫೭–೫೮ನೇ ವರ್ಷಗಳಲ್ಲಿ ಪದವಿ, ತಾಂತ್ರಿಕ ಮತ್ತು ಕಾನೂನು ಕೋರ್ಸುಗಳ ಪರೀಕ್ಷೆಗಳ ಅಕ್ರಮಗಳಲ್ಲಿ ತೊಡಗಿದ ವಿದ್ಯಾರ್ಥಿಗಳನ್ನು ಹಿಡಿದಿರುವ ಸಂಖ್ಯೆ ಎಷ್ಟು ?

ಆ) ಈಗಿರುವ ಪರೀಕ್ಷಾ ಪದ್ಧತಿಯು ವಿಫಲವಾಗಿರುವುದರಿಂದ ಸರ್ಕಾರವು ಪರೀಕ್ಷಾ ಪದ್ಧತಿಯನ್ನು ಬದಲಾಯಿಸುವ ಅಂಶವನ್ನು ಪರಿಶೀಲಿಸಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಕ ಮಾಡಲಾಗಿದೆಯೆ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ

	೧೯೮೬-೮೭	೧೯೮೭-೮೮
ಪದವಿ ಕೋರ್ಸ್	೧೫೮೭	೧೮೪೯
ತಾಂತ್ರಿಕ ಕೋರ್ಸ್	೨೮೯	೪೩೨
ಕಾನೂನು ಕೋರ್ಸ್	೧೩೫	೫೧೭

ಆ) ಈಗಿರುವ ಪರೀಕ್ಷಾ ಪದ್ಧತಿಯನ್ನು ಬದಲಾಯಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಮೇಲೆ ಹೇಳಿರುವ ಉತ್ತರದ ಮೇರೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನ ಗೊಳಿಸುವ ಬಗ್ಗೆ.

೧೪೪೩. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಾಗಿಲು). — ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಭಾವಿ ಕೊರೆಯಲು ಎಷ್ಟು ಹಣ ಒದಗಿಸಲಾಗಿತ್ತು (ಜಿಲ್ಲಾವಾರು ವಿವರಗಳನ್ನು ಒದಗಿಸಬೇಕು)?

ಆ) ಈ ಯೋಜನೆಗೆ ಮೇಲಿನ ಅವಧಿಯಲ್ಲಿ ಬಿಡುಗಡೆಯಾದ ಮತ್ತು ಖರ್ಚು ಮಾಡಿದ ಹಣ ಎಷ್ಟು ?

ಇ) ಈ ಯೋಜನೆಯನ್ನು ಕಾರ್ಯಗತಗೊಳಿಸದ ಬಗ್ಗೆ ರೈತರಿಂದ ಸಾಕಷ್ಟು ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸುವ ಕುರಿತಾಗಿ ಸರ್ಕಾರ ಉದ್ದೇಶಿಸಿದ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಮತ್ತು ಆ) ಪಟ್ಟಿಯನ್ನು ಲಗತ್ತಿಸಲಾಗಿದೆ. ಹಣವನ್ನು ಎಲ್ಲಾ ಯೋಜನೆಗಳಿಗೆ ಒಟ್ಟಿಗೆ ಬಿಡುಗಡೆ ಮಾಡಿದೆ.

ಇ) ಇಲ್ಲ.

ಈ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.